ಹೋದಾಗ ಕೊಳದ ಗೋಡೆ ಒಡೆದು ಮೇಲ್ಕಂಡ ಘಟನೆ ಸಂಭವಿಸಿತೆಂದೂ ತಿಳಿದು ಬಂದಿದೆ. ಕೊಳದ ಗೋಡೆ ಕಟ್ಟುವ ಕೆಲಸ ೨೬-೫-೮೮ ರಂದು ಮುಗಿಸಲಾಗಿದ್ದು, ೨೭-೫-೮೮ ರಿಂದ ಆದರಲ್ಲಿ ನೀರು ತುಂಬಿಳ ನಲ್ಲಿಗಳನ್ನು ಅದಕ್ಕೆ ಹಾಕಿ ನೀರನ್ನು ಒದಗಿಸಲಾಗುತ್ತಿತ್ತೆಂದು ಕಂಡು ಬಂದಿದೆ ಕೊಳದ ನಿರ್ಮಾಣ ಸರಿಯಾಗಿ ಇಲ್ಲದಿದ್ದುದರಿಂದ ಈ ಘಟನೆಯಾಗಿದೆಯೆಂದು ಸ್ಥಳ ಪರೀಕ್ಷೆಯಿಂದ ಗೊತ್ತಾಗಿದೆ. ಮಹದೇವಪುರ ಪೋಲೀಸರು ಈ ಬಗ್ಗೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತನಿಖೆಯನ್ನು ನಡೆಸುತ್ತಿದ್ದಾರೆ. ತೊಂದರೆಗೊಳಗಾದವರಿಗೆ ಪರಿಹಾರ ಕೊಡಲು ರೆವಿನ್ಯೂ ಇಲಾಖೆಯವರಿಗೆ ಬರೆಯಲಾಗಿದೆ ಮತ್ತು ಕಾಮಗಾರಿ ಇಲಾಖೆಯವರಿಗೆ ದುರ್ಘಟನೆ ನಡೆದ ಸ್ಥಳವನ್ನು ಪರಿಶೀಲಿಸಿ ಈ ದುರ್ಘಟನೆಗೆ ಕಾರಣ ತಿಳಿಯಲು ಬರೆಯಲಾಗಿದೆ.

೨) ಶೀಘ್ರಲಿಪಿಗಾರರು ಹಾಗೂ ಬೆರಳಚ್ಚುಗಾರರ ಆಯ್ಕೆಯ ಸಮಿತಿಯವರು ಅಭ್ಯರ್ಥಿಗಳು ಪಡೆದ ಅಂಕಗಳನ್ನು ಆಯ್ಕೆ ಪಟ್ಟಿಯಲ್ಲಿ ನಮೂದಿಸದೇ ಇರುವ ಬಗ್ಗೆ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಸರಕಾರದ ವಿವಿಧ ಇಲಾಖೆಗಳ ಶೀಘ್ರಲಿಪಿಗಾರರು ಬೆರಳಚ್ಚುಗಾರರ ಆಯ್ಕೆ ಸಮಿತಿಯ ಮೇಲೆ ಭ್ರಷ್ಟಾಚಾರದ ಆರೋಪಗಳು ಸದನದಲ್ಲಿ ಪ್ರಸ್ತಾಪವಾದಾಗ ಅಭ್ಯರ್ಥಿಗಳಿಂ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದೆಂದು ಮಾನ್ಯ ಮಂಖ್ಯಿ ಮಂತ್ರಿಗಳಿಂ ತಿಳಿಸಿದ್ದರು. ಅದರಂತೆಯೇ ಒಂದೆರಡು ತಿಂಗಳುಗಳ ಹಿಂದೆ ಆಯ್ಕೆಯಾದ ಶೀಘ್ರಲಿಪಿಗಾರರ ಪಟ್ಟಿಯನ್ನು ಸದರಿ ಸಮಿತಿಯಿಂ ಪ್ರಕಟಿಸಿತು. ಆದರೆ ಅಭ್ಯರ್ಥಿಗಳು ಗಳಿಸಿರುವ ಅಂಕಗಳು ಎಷ್ಟು ಎಂಬುದನ್ನು ಸದರಿ ಪಟ್ಟಿಯಲ್ಲಿ ನಮೂದಿಸಲಿಲ್ಲ. ಇದರಿಂದಾಗಿ ಅಭ್ಯರ್ಥಿಗಳಿಗೆ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿಲ್ಲ ಎಂಬ ಅನುಮಾನ ಬಂದಿದೆ. ಹಾಗೂ ಅಂಕಗಳನ್ನು ನಮೂದಿಸದಿರುವುದನ್ನು ನೋಡಿದರೆ ಆಯ್ಕೆಯಲ್ಲಿ ಅವ್ಯವಹಾರ ನಡೆದಿದೆ. ಎಂಬ ಅನುಮಾನಕ್ಕೆ ಪುಷ್ಟಿ ಸಿಕ್ಕಂತಾಗುತ್ತದೆ. ಕಾರಣ, ಇನ್ನು ಕೆಲವೇ ದಿನಗಳಲ್ಲಿ ಸದರಿ ಸಮಿತಿಯವರೇ ಪ್ರಕಟಿಸಲಿರುವ ಬೆರಳಚ್ಚುಗಾರರ ಆಯ್ಕೆ ಪಟ್ಟಿಯಲ್ಲಿ ತಪ್ಪದೆ ಅಂಕಗಳನ್ನು ನಮೂದಿಸಬೇಕೆಂದು ಸದರಿ ಸಮಿತಿಯವರಿಗೆ ಸೂಚಿಸುವುದಲ್ಲದೆ. ಈಗಾಗಲೇ ಆಯ್ಕೆ ಮಾಡಿರುವ ಶೀಘ್ರಲಿಪಿಗಾರರ ಅಂಕಗಳನ್ನೂ ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಅಭ್ಯರ್ಥಿಗಳಲ್ಲಿ ಮೂಡಿರುವ ಅನುಮಾನ ಹಾಗೂ ಸಂದೇಹಗಳನ್ನು ನಿವಾರಿಸುವಂತೆ ಸರಕಾರದವರನ್ನು ಒತ್ತಾಯ ಪಡಿಸುವುದಲ್ಲದೆ ಈ ಬಗ್ಗೆ ಸರಕಾರದವರು ಹೇಳಿಕೆ ನೀಡಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಎಲ್ಲ ಇಲಾಖೆಗಳ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಚಿಸಿದ್ದ ನೇಮಕಾತಿ ಸಮಿತಿಯ ಮೇಲೆ ಅವ್ಯವಹಾರದ ಆರೋಪಗಳು ಸ್ವೀಕೃತವಾದ್ದರಿಂದ ನೇಮಕಾತಿ ಸಮಿತಿಯನ್ನು ರದ್ದುಗೊಳಿಸಿ, ಈ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಹೊಸ ನಿಯಮಾವಳಿಯನ್ನು ದಿನಾಂಕ ೬-೪-೮೯೭೭ ರಂದು ಹೊರಡಿಸಲಾಯಿತು. ಈ ನಿಯಮಾವಳಿಯನ್ವಯ ಅಭ್ಯರ್ಥಿಗಳ ಆಯ್ಕೆಯನ್ನು ಅವರು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮಾಡಬೇಕಾಗಿದೆ ನಿಯಮಾವಳಿಯಲ್ಲಿ, ಅಭ್ಯರ್ಥಿಗಳ ಆಯ್ಕೆ ಪಟ್ಟಿಯಲ್ಲಿ ಅವರ ಅಂಕಗಳನ್ನು ಸಹ ಪ್ರಕಟಿಸಲು ನಿರ್ದಿಷ್ಟ ಅವಕಾಶ ಮಾಡಿಲ್ಲ. ಅಭ್ಯರ್ಥಿಗಳ ಅಂಕಗಳನ್ನು ಮತ್ತು ವರ್ಗಗಳನ್ನು ಪ್ರಕಟಿಸುವ ವಿಷಯವನ್ನು ಪರಿಶೀಲಿಸಲಾಗುವುದು.

೩) ಹುಕ್ಕೇರಿ ತಾಲ್ಲೂಕು ಕಣಗಲ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳಾವಕಾಶ ಹಾಗೂ ಅಮ್ಮಣಗಿ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿ ನೇಮಕ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಕಣಗಲ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಸ್ಥಳಾವಕಾಶ ಮಾಡಿಕೊಡುವಂತೆ ಹಲವಾರು ಬಾರಿ ಸಂಬಂಧಪಟ್ಟ ಇಲಾಖೆಗೆ ಕೇಳಿಕೊಂಡರೂ ಇಲ್ಲಿಯವರೆಗೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದರಲ್ಲಿ ಹಣಕಾಸಿನ ತೊಂದರೆಯಾಗಿದೆ. ಜಿಲ್ಲಾ ಪರಿಷತ್, ಬೆಳಗಾಂ,